ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-10-2004.

# *ಏಕತೆಯನ್ನು ಪ್ರತ್ಯಕ್ಷ ಮಾಡುವುದಕ್ಕಾಗಿ ಏಕರಸ ಸ್ಥಿತಿಯನ್ನು ತಯಾರು ಮಾಡಿ, ಸ್ವಮಾನದಲ್ಲಿ ಇರಿ, ಎಲ್ಲರಿಗೂ ಸನ್ಮಾನವನ್ನು ಕೊಡಿ*

(एक को प्रत्यक्ष करने के लिए एकरस स्थिति बनाओ, स्वमान में रहो, सबको सम्मान दो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಮೂರು ಭಾಗ್ಯದ ನಕ್ಷತ್ರಗಳು ಹೊಳೆಯುತ್ತಿರುವುದನ್ನು ನೋಡುತ್ತಿದ್ದಾರೆ. ಒಂದನೆಯದು ಪರಮಾತ್ಮನ ಪಾಲನೆಯ ಭಾಗ್ಯ, ಪರಮಾತ್ಮನ ವಿದ್ಯೆಯ ಭಾಗ್ಯ, ಪರಮಾತ್ಮನ ವರದಾನಗಳ ಭಾಗ್ಯ. ಇಂತಹ ಮೂರು ನಕ್ಷತ್ರಗಳನ್ನು ಎಲ್ಲರ ಮಸ್ತಕದ ಮಧ್ಯದಲ್ಲಿ ನೋಡುತ್ತಿದ್ದಾರೆ. ತಾವು ತಮ್ಮ ಭಾಗ್ಯದ ಹೊಳೆಯುತ್ತಿರುವ ನಕ್ಷತ್ರಗಳನ್ನು ನೋಡುತ್ತಿರುವಿರಾ? ಕಾಣಿಸುತ್ತದೆಯೇ? ಇಂತಹ ಶ್ರೇಷ್ಠ ಭಾಗ್ಯದ ನಕ್ಷತ್ರಗಳು ಇಡೀ ವಿಶ್ವದಲ್ಲಿ ಬೇರೆ ಯಾರ ಮಸ್ತಕದಲ್ಲಿಯೂ ಸಹ ಹೊಳೆಯುತ್ತಿರುವಂತೆ ಕಾಣಿಸುವುದಿಲ್ಲ. ಈ ಭಾಗ್ಯದ ನಕ್ಷತ್ರಗಳಂತೂ ಎಲ್ಲರ ಮಸ್ತಕದಲ್ಲಿ ಹೊಳೆಯುತ್ತಿವೆ, ಆದರೆ ಹೊಳಪಿನಲ್ಲಿ ಕೆಲವೊಂದು ಕಡೆ ಅಂತರ ಕಾಣಿಸುತ್ತಿದೆ. ಕೆಲವರ ಹೊಳಪು ಬಹಳ ಶಕ್ತಿಶಾಲಿಯಾಗಿ ಇದೆ, ಕೆಲವರ ಹೊಳಪು ಮಧ್ಯಮವಾಗಿದೆ. ಭಾಗ್ಯ ವಿಧಾತ ಎಲ್ಲಾ ಮಕ್ಕಳಿಗೂ ಒಂದೇ ಸಮಾನವಾದ ಭಾಗ್ಯವನ್ನು ಕೊಟ್ಟಿದ್ದಾರೆ. ಕೆಲವರಿಗೆ ವಿಶೇಷವಾಗಿ ಕೊಟ್ಟಿಲ್ಲ. ಪಾಲನೆಯನ್ನು ಸಹ ಒಂದೇ ರೀತಿ, ವಿದ್ಯೆಯೂ ಸಹ ಒಟ್ಟಿಗೆ, ವರದಾನವು ಸಹ ಒಂದೇ ರೀತಿ ಎಲ್ಲರಿಗೂ ಸಿಕ್ಕಿದೆ. ಇಡೀ ವಿಶ್ವದ ಮೂಲೆ ಮೂಲೆಯಲ್ಲಿ ಸದಾ ಒಂದೇ ವಿದ್ಯೆ ಇರುತ್ತದೆ. ಒಂದೇ ಮುರಳಿ, ಒಂದೇ ತಾರೀಕು ಹಾಗೂ ಅಮೃತ ವೇಳೆ

ಸಮಯವೂ ಸಹ ತಮ್ಮ ತಮ್ಮ ದೇಶದ ಪ್ರಮಾಣ ಇದ್ದರೂ ಸಹ ಒಂದೇ ಆಗಿದೆ, ವರದಾನವು ಒಂದೇ ಆಗಿದೆ, ಇದು ಅದ್ಭುತವಾಗಿದೆ. ಸ್ಲೋಗನ್ ಸಹ ಒಂದೇ ಆಗಿದೆ. ಯಾವುದಾದರೂ ವ್ಯತ್ಯಾಸವಿದೆಯೇ? ಅಮೇರಿಕಾ ಹಾಗೂ ಲಂಡನ್ನಲ್ಲಿ ವ್ಯತ್ಯಾಸ ಇದೆಯೇ? ಇಲ್ಲ. ಹಾಗಾದರೆ ಅಂತರವೇಕೆ ಇದೆ?

ಅಮೃತ ವೇಳೆಯ ಪಾಲನೆ ನಾಲ್ಕಾರು ಕಡೆ ಒಬ್ಬರೇ ಬಾಪ್‌ದಾದಾ ಮಾಡುತ್ತಾರೆ. ನಿರಂತರ ನೆನಪಿನ ವಿಧಿಯು ಸಹ ಎಲ್ಲರಿಗೂ ಒಂದೇ ಸಿಕ್ಕಿದೆ, ಆದರೂ ಸಹ ಏಕೆ ನಂಬರ್‌ವಾರ್ ಆಗಿದ್ದೀರಿ? ಒಂದೇ ವಿಧಿ ಆದರೆ ಸಿದ್ಧಿಯ ಪ್ರಾಪ್ತಿಯಲ್ಲಿ ಅಂತರವೇಕೆ? ಬಾಪ್‌ದಾದಾರವರಿಗೆ ನಾಲ್ಕಾರು ಕಡೆಯ ಮಕ್ಕಳ ಮೇಲೆ ಪ್ರೀತಿಯೂ ಸಹ ಒಂದೇ ರೀತಿ ಇದೆ. ಬಾಪ್‌ದಾದಾರವರ ಪ್ರೀತಿಯಲ್ಲಿ ಭಲೇ ಪುರುಷಾರ್ಥದ ಪ್ರಮಾಣ ನಂಬರ್‌ನಲ್ಲಿ ಲಾಸ್ಟ್ ನಂಬರ್‌ನಲ್ಲಿ ಇದ್ದರೂ ಸಹ, ಬಾಪ್‌ದಾದಾರವರ ಪ್ರೀತಿ ಲಾಸ್ಟ್ ನಂಬರ್‌ನಲ್ಲಿರುವವರಿಗೂ ಸಹ ಅದೇ ಆಗಿದೆ. ಲಾಸ್ಟ್ ನಂಬರ್‌ನವರ ಮೇಲೆ ಪ್ರೀತಿಯ ಜೊತೆಗೆ ಇನ್ನಷ್ಟು ದಯೆಯೂ ಇದೆ- ಲಾಸ್ಟ್ ಇರುವವರು ಫಾಸ್ಟ್ ಆಗಿ, ಫಸ್ಟ್ ನಲ್ಲಿ ಬಂದು ಬಿಡಲಿ. ಯಾರೆಲ್ಲಾ ದೂರ ದೂರದಿಂದ ತಲುಪಿದ್ದೀರೋ ಅವರು ಹೇಗೆ ತಲುಪಿದ್ದೀರಿ? ಪರಮಾತ್ಮನ ಪ್ರೀತಿ ನಿಮ್ಮನ್ನು ಸೆಳೆದು ತಂದಿದೆ ಅಲ್ಲವೇ! ಪ್ರೀತಿಯ ದಾರದಲ್ಲಿ ಸೆಳೆದು ಬಂದಿದ್ದೀರಿ. ಬಾಪ್‌ದಾದಾರವರಿಗೆ ಎಲ್ಲರೊಂದಿಗೆ ಪ್ರೀತಿ ಇದೆ. ಈ ರೀತಿ ತಿಳಿಯುತ್ತೀರಿ ಅಲ್ಲವೇ ಅಥವಾ ಪ್ರಶ್ನೆ ಬರುತ್ತದೆಯೇ- ನನ್ನೊಂದಿಗೆ ಪ್ರೀತಿ ಇದೆಯೇ ಅಥವಾ ಕಡಿಮೆ ಇದೆಯೇ? ಬಾಪ್‌ದಾದಾರವರ ಪ್ರೀತಿ ಪ್ರತಿಯೊಬ್ಬ ಮಗುವಿನೊಂದಿಗೆ ಒಬ್ಬರಿನ್ನೊಬ್ಬರಿಗಿಂತ ಜಾಸ್ತಿ ಇದೆ. ಹಾಗೂ ಈ ಪರಮಾತ್ಮನ ಪ್ರೀತಿಯೇ ಎಲ್ಲಾ ಮಕ್ಕಳ ವಿಶೇಷ ಪಾಲನೆಯ ಆಧಾರವಾಗಿದೆ. ಪ್ರತಿಯೊಬ್ಬರು ಏನೆಂದು ತಿಳಿಯುತ್ತೀರಿ- ನನ್ನ ಪ್ರೀತಿ ತಂದೆಯೊಂದಿಗೆ ಜಾಸ್ತಿ ಇದೆಯೇ ಅಥವಾ ಅನ್ಯರ ಪ್ರೀತಿ ಜಾಸ್ತಿ ಇದೆಯೇ, ನನ್ನದು ಕಡಿಮೆ ಇದೆಯೇ? ಈ ರೀತಿ ತಿಳಿಯುತ್ತೀರಾ? ನನಗೆ ಪ್ರೀತಿ ಇದೆ ಎಂದು ತಿಳಿಯುತ್ತೀರಿ ಅಲ್ಲವೇ? ನನಗೆ ಪ್ರೀತಿ ಇದೆ ಎಂದು ತಿಳಿಯುತ್ತೀರಲ್ಲವೇ, ಇದೆ ಅಲ್ಲವೇ? ಪಾಂಡವರು ಇದೆಯಲ್ಲವೇ? ಪ್ರತಿಯೊಬ್ಬರು ಹೇಳುತ್ತಾರೆ "ನನ್ನ ಬಾಬಾ", ಸೆಂಟರ್ ಇಂಚಾರ್ಜ್ ಬಾಬಾ ಎಂದು ಹೇಳುವುದಿಲ್ಲ, ದಾದಿಯರ ಬಾಬಾ, ಜಾನಕಿ ದಾದಿಯ ಬಾಬಾ, ಎಂದು ಹೇಳುತ್ತೀರಾ? ಇಲ್ಲ. ನನ್ನ ಬಾಬಾ ಎಂದು ಹೇಳುತ್ತೀರಿ. ಯಾವಾಗ ನನ್ನದು ಎಂದು ಹೇಳುತ್ತೀರೋ ಆಗ ಬಾಬಾರವರು ಸಹ ನನ್ನದು ಎಂದು ಹೇಳಿಬಿಟ್ಟರು, ಕೇವಲ ಒಂದು ನನ್ನ ಶಬ್ಧದಲ್ಲಿಯೇ ಮಕ್ಕಳು ತಂದೆಯವರಾಗಿ ಬಿಟ್ಟರು ಹಾಗು ತಂದೆ ಮಕ್ಕಳವರಾಗಿ ಬಿಟ್ಟರು. ಪರಿಶ್ರಮವೆನಿಸಿತೇ? ಪರಿಶ್ರಮವೆನಿಸಿತೇ? ಸ್ವಲ್ಪ, ಸ್ವಲ್ಪ? ಇಲ್ಲವೇ? ಕೆಲವೊಮ್ಮೆ ಅನಿಸಿತೇ? ಅನಿಸಲಿಲ್ಲವೇ? ಅನಿಸುತ್ತದೆ. ಯಾವಾಗ ಪರಿಶ್ರಮವೆನಿಸುತ್ತದೆಯೋ ಆಗ ಏನು ಮಾಡುತ್ತೀರಿ? ದಣಿದು ಬಿಡುತ್ತೀರಿ. ಹೃದಯದಿಂದ, ಪ್ರೀತಿಯಿಂದ ಹೇಳಿ "ನನ್ನ ಬಾಬಾ", ಆಗ ಪರಿಶ್ರಮವು ಪ್ರೀತಿಯಲ್ಲಿ ಬದಲಾಗಿ ಬಿಡುತ್ತದೆ. ನನ್ನ ಬಾಬಾ ಎಂದು ಹೇಳುವುದರಿಂದಲೇ ಬಾಬಾರವರ ಹತ್ತಿರಕ್ಕೆ ಧ್ವನಿ ತಲುಪಿ ಬಿಡುತ್ತದೆ. ಹಾಗೂ ತಂದೆ ಎಕ್ಸ್ಟ್ರಾ ಸಹಯೋಗವನ್ನು ಕೊಡುತ್ತಾರೆ ಆದರೆ ಇದು ಹೃದಯದ ವ್ಯಾಪಾರವಾಗಿದೆ, ಮಾತಿನ ವ್ಯಾಪಾರವಲ್ಲ. ಹೃದಯದ ವ್ಯಾಪಾರವಾಗಿದೆ. ಹಾಗಾದರೆ ಹೃದಯದ ವ್ಯಾಪಾರ ಮಾಡುವುದರಲ್ಲಿ ಬುದ್ಧಿವಂತರಾಗಿದ್ದೀರಿ ಅಲ್ಲವೇ? ಆಗಿದ್ದೀರಿ ಅಲ್ಲವೇ? ಹಿಂದೆ ಕುಳಿತಿರುವವರಿಗೆ ಬರುತ್ತದೆಯೇ? ಬರುತ್ತದೆ ಆದ್ದರಿಂದಲೇ ತಲುಪಿದ್ದೀರಿ. ಆದರೆ ಎಲ್ಲರಿಗಿಂತ ದೂರದೇಶಿ ಯಾರಾಗಿದ್ದಾರೆ? ಅಮೇರಿಕಾ? ಅಮೇರಿಕಾದವರು ದೂರದೇಶಿ ಆಗಿದ್ದಾರೆಯೇ ಅಥವಾ ತಂದೆ ದೂರದೇಶಿಯಾಗಿದ್ದಾರೆಯೇ? ಅಮೇರಿಕಾ ಅಂತೂ ಈ ಪ್ರಪಂಚದಲ್ಲಿಯೇ ಇದೆ. ಆದರೆ ತಂದೆಯು ಇನ್ನೊಂದು ಪ್ರಪಂಚದಿಂದ ಬರುತ್ತಾರೆ. ಅಂದಮೇಲೆ ಎಲ್ಲರಿಗಿಂತ ದೂರದೇಶಿ

ಯರಾಗಿದ್ದಾರೆ? ಅಮೇರಿಕಾ ಅಲ್ಲ? ಎಲ್ಲರಿಗಿಂತ ದೂರದೇಶಿ ಬಾಪ್‌ದಾದಾ ಆಗಿದ್ದಾರೆ. ಒಬ್ಬರು ವತನದಿಂದ ಬರುತ್ತಾರೆ, ಒಬ್ಬರು ಪರಮಧಾಮದಿಂದ ಬರುತ್ತಾರೆ, ಹಾಗಾದರೆ ಅದರ ಮುಂದೆ ಅಮೆರಿಕಾ ಏನಾಗಿದೆ? ಏನೂ ಅಲ್ಲ.

ಆದ್ದರಿಂದ ಇಂದು ದೂರದೇಶಿ ತಂದೆ ಈ ಸಾಕಾರ ಪ್ರಪಂಚದ ದೂರದೇಶಿ ಮಕ್ಕಳೊಂದಿಗೆ ಮಿಲನ ಮಾಡುತ್ತಿದ್ದಾರೆ. ನಶೆ ಇದೆಯೇ? ಇಂದು ನಮಗಾಗಿ ಬಾಪ್‌ದಾದಾ ಬಂದಿದ್ದಾರೆ! ಭಾರತವಾಸಿಯರಂತೂ ಬಾಬಾರವರಾಗಿಯೇ ಇದ್ದಾರೆ ಆದರೆ ಡಬಲ್ ವಿದೇಶಿಯರನ್ನು ನೋಡಿ ಬಾಪ್‌ದಾದಾರವರು ವಿಶೇಷವಾಗಿ ಖುಷಿಪಡುತ್ತಾರೆ. ಏಕೆ ಖುಷಿ ಪಡುತ್ತಾರೆ? ಬಾಪ್‌ದಾದಾರವರು ನೋಡಿದ್ದಾರೆ ಭಾರತದಲ್ಲಂತೂ ಬಾಬಾ ಬಂದಿದ್ದಾರೆ ಆದ್ದರಿಂದ ಭಾರತವಾಸಿಯರಿಗೆ ಈ ನಶೆ ಎಕ್ಸ್ಟ್ರಾ ಇದೆ ಆದರೆ ಡಬಲ್ ಫಾರಿನರ್ಸ್ ನೊಂದಿಗೆ ಪ್ರೀತಿ ಏಕೆ ಇದೆ ಎಂದರೆ- ಭಿನ್ನ-ಭಿನ್ನ ಕಲ್ಚರ್ ಇದ್ದರೂ ಸಹ ಬ್ರಾಹ್ಮಣ ಕಲ್ಚರ್ನಲ್ಲಿ ಪರಿವರ್ತನೆ ಆಗಿಬಿಟ್ಟಿರಿ. ಆಗಿಬಿಟ್ಟಿದ್ದೀರಿ ಅಲ್ಲವೇ? ಈಗಂತೂ ಸಂಕಲ್ಪ ಬರುವುದಿಲ್ಲ- ಇದು ಭಾರತದ ಕಲ್ಚರ್ ಆಗಿದೆ, ನಮ್ಮ ಕಲ್ಚರ್ ಅಂತೂ ಬೇರೆಯಾಗಿದೆ. ಇಲ್ಲ. ಈಗ ಬಾಪ್‌ದಾದಾರವರು ಫಲಿತಾಂಶದಲ್ಲಿ ನೋಡುತ್ತಿದ್ದಾರೆ, ಎಲ್ಲರೂ ಒಂದು ಕಲ್ಚರಿನವರಾಗಿ ಬಿಟ್ಟಿದ್ದಾರೆ. ಎಲ್ಲಿಯವರೇ ಆಗಿರಲಿ, ಸಾಕಾರ ಶರೀರಕ್ಕಾಗಿ ಭಿನ್ನ-ಭಿನ್ನ ದೇಶವಿದೆ ಆದರೆ ಆತ್ಮ ಬ್ರಾಹ್ಮಣ ಕಲ್ಚರಿನದಾಗಿದೆ ಹಾಗೂ ಡಬಲ್ ಫಾರಿನರ್ಸ್ನ ಒಂದು ಮಾತು ಬಾಪ್‌ದಾದಾರವರಿಗೆ ಬಹಳ ಒಳ್ಳೆಯದನಿಸುತ್ತದೆ, ಅದು ಯಾವುದು ಗೊತ್ತಿದೆಯೇ? (ಬೇಗ ಸೇವೆ ಮಾಡಲು ತೊಡಗಿ ಬಿಟ್ಟಿದ್ದಾರೆ) ಇನ್ನು ಹೇಳಿ? (ನೌಕರಿಯು ಮಾಡುತ್ತಾರೆ, ಸೇವೆಯು ಮಾಡುತ್ತಾರೆ) ಇದನ್ನು ಅಂತೂ ಭಾರತದಲ್ಲಿಯೂ ಮಾಡುತ್ತಾರೆ. ಭಾರತದಲ್ಲಿಯೂ ನೌಕರಿ ಮಾಡುತ್ತಾರೆ. (ಏನೇ ಆಗುತ್ತದೆ ಎಂದರೆ ಸತ್ಯತೆಯಿಂದ ತಮ್ಮ ಬಲಹೀನತೆಯನ್ನು ಹೇಳುತ್ತಾರೆ, ಸ್ಪಷ್ಟವಾದಿ ಆಗಿದ್ದಾರೆ) ಒಳ್ಳೆಯದು, ಭಾರತದವರು ಸಷ್ಟವಾದಿ ಆಗಿಲ್ಲವೇ?

ಬಾಪ್‌ದಾದಾ ಇದನ್ನು ನೋಡಿದರು- ಬಲೆ ದೂರ ಇರುತ್ತಾರೆ ಆದರೆ ತಂದೆಯ ಪ್ರೀತಿಯ ಕಾರಣ ಪ್ರೀತಿಯಲ್ಲಿ ಬಹುತೇಕರು ಸಮೀಪ ಇದ್ದಾರೆ. ಭಾರತಕ್ಕೆ ಅಂತೂ ಭಾಗ್ಯ ಇದ್ದೇ ಇದೆ ಆದರೆ ದೂರ ಇದ್ದರೂ ಎಲ್ಲರೂ ಪ್ರೀತಿಯಲ್ಲಿ ಸಮೀಪ ಇದ್ದಾರೆ. ಒಂದುವೇಳೆ ಬಾಪ್‌ದಾದಾ ಕೇಳುತ್ತಾರೆ ಪ್ರೀತಿಯಲ್ಲಿ ಎಷ್ಟು ಪರ್ಸೆಂಟ್ ಇದ್ದೀರಿ? ತಂದೆಯ ಪ್ರೀತಿಯ ಸಬ್ಜೆಕ್ಟ್ನಲ್ಲಿ ಪರ್ಸೆಂಟೇಜ್ ಇದೆಯೇ? ಯಾರು ನೂರು ಪರ್ಸೆಂಟ್ ಪ್ರೀತಿಯಲ್ಲಿ ಇದ್ದೇವೆ ಎಂದು ತಿಳಿಯುತ್ತೀರೋ ಅವರು ಕೈಯನ್ನು ಎತ್ತಿರಿ. (ಎಲ್ಲರೂ ಕೈ ಎತ್ತಿದರು) ಒಳ್ಳೆಯದು- ನೂರು ಪರ್ಸೆಂಟ್? ಭಾರತವಾಸಿಯರು ಕೈಯನ್ನು ಎತ್ತುತ್ತಿಲ್ಲ? ನೋಡಿ ಭಾರತಕ್ಕಂತೂ ಎಲ್ಲರಿಗಿಂತ ದೊಡ್ಡ ಭಾಗ್ಯ ಸಿಕ್ಕಿದೆ- ತಂದೆ ಭಾರತದಲ್ಲಿಯೇ ಬಂದಿದ್ದಾರೆ. ಇದರಲ್ಲಿ ತಂದೆಗೆ ಅಮೇರಿಕಾ ಇಷ್ಟವಾಗಿಲ್ಲ, ಆದರೆ ಭಾರತ ಇಷ್ಟವಾಯಿತು. ಇವರು (ಅಮೇರಿಕಾದ ಗಾಯತ್ರಿ ಸಹೋದರಿ) ಸಮ್ಮುಖದಲ್ಲಿ ಕುಳಿತಿದ್ದಾರೆ ಆದ್ದರಿಂದ ಅಮೇರಿಕಾ ಎಂದು ಹೇಳುತ್ತಿದ್ದೇವೆ. ಆದರೆ ದೂರ ಇದ್ದರೂ ಸಹ ಒಳ್ಳೆಯ ಪ್ರೀತಿ ಇದೆ. ತೊಂದರೆಗಳು ಬರುತ್ತವೆ ಆದರೂ ಸಹ ಬಾಬಾ ಬಾಬಾ ಎಂದು ಹೇಳಿ ಅಳಿಸಿ ಬಿಡುತ್ತೀರಿ. ಪ್ರೀತಿಯಲ್ಲಿ ಅಂತೂ ಬಾಪ್‌ದಾದಾರವರು ಸಹ ಪಾಸ್ ಮಾಡಿಬಿಟ್ಟಿದ್ದಾರೆ ಇನ್ನು ಯಾವುದರಲ್ಲಿ ಪಾಸ್ ಆಗಬೇಕು? ಆಗಬೇಕಲ್ಲವೇ. ಆಗಿದ್ದೀರಿ ಹಾಗೂ ಇನ್ನೂ ಆಗಬೇಕು! ಅಂದ ಮೇಲೆ ವರ್ತಮಾನ ಸಮಯ ಪ್ರಮಾಣ ಬಾಪ್‌ದಾದಾರವರು ಇದನ್ನೇ ಬಯಸುತ್ತಾರೆ- ಪ್ರತಿಯೊಬ್ಬ ಮಗುವಿನಲ್ಲಿ ಸ್ವ ಪರಿವರ್ತನೆಯ ಶಕ್ತಿಯ ಪರ್ಸೆಂಟೇಜ್,

ಹೇಗೆ ಪ್ರೀತಿಯ ಶಕ್ತಿಯಲ್ಲಿ ಎಲ್ಲರೂ ಕೈ ಎತ್ತಿದರು, ಎಲ್ಲರೂ ಕೈ ಎತ್ತಿದರಲ್ಲವೇ! ಅದೇ ಪ್ರಮಾಣ ಸ್ವ ಪರಿವರ್ತನೆಯಲ್ಲಿಯೂ ತೀವ್ರಗತಿ ಇದೆಯೇ? ಇದರಲ್ಲಿ ಅರ್ಧ ಕೈ ಎತ್ತುವಿರಾ ಅಥವಾ ಪೂರ್ಣವಾಗಿ ಎತ್ತುವಿರಾ? ಹೇಗೆ ಎತ್ತುವಿರಿ? ಪರಿವರ್ತನೆಯನ್ನು ಮಾಡುತ್ತೀರಿ ಆದರೆ ಅದರಲ್ಲಿ ಸಮಯ ಹಿಡಿಸುತ್ತದೆ. ಸಮಯದ ಸಮೀಪತೆಯ ಪ್ರಮಾಣ ಸ್ವ ಪರಿವರ್ತನೆಯ ಶಕ್ತಿ ಎಷ್ಟು ತೀವ್ರವಾಗಿ ಇರಬೇಕೆಂದರೆ ಕಾಗದದ ಮೇಲೆ ಬಿಂದುವಿಡಲು ಎಷ್ಟು ಸಮಯ ಹಿಡಿಸುತ್ತದೆಯೋ ಅಷ್ಟು ತೀವ್ರವಾಗಿರಬೇಕು. ಬಿಂದು ಇಡುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ಕ್ಷಣವೂ ಬೇಕಾಗಿಲ್ಲ. ಸರಿಯಲ್ಲವೇ! ಅಂದ ಮೇಲೆ ಇಂತಹ ತೀವ್ರಗತಿ ಸ್ವ ಪರಿವರ್ತನೆಯಲ್ಲಿ ಇದೆಯೇ? ಇದರಲ್ಲಿ ಕೈ ಎತ್ತಬಹುದೇ? ಇದರಲ್ಲಿ ಅರ್ಧ ಕೈ ಎತ್ತುವರು. ಸಮಯದ ಗತಿ ತೀವ್ರವಾಗಿದೆ, ಸ್ವ ಪರಿವರ್ತನೆಯ ಶಕ್ತಿ ಇಷ್ಟು ತೀವ್ರವಾಗಿರಬೇಕು ಹಾಗೂ ಯಾವಾಗ ಪರಿವರ್ತನೆ ಎಂದು ಹೇಳುತ್ತೀರೋ ಆಗ ಪರಿವರ್ತನೆಯ ಮೊದಲು ಸ್ವ ಎಂಬ ಪದವನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ.  ಕೇವಲ ಪರಿವರ್ತನೆಯಲ್ಲ ಸ್ವ ಪರಿವರ್ತನೆ. ಬಾಪ್‌ದಾದಾರವರಿಗೆ ನೆನಪಿದೆ ಮಕ್ಕಳು ಒಂದು ವರ್ಷದಲ್ಲಿ ಸಂಸ್ಕಾರಗಳ ಪರಿವರ್ತನೆಯ ಮೂಲಕ ವಿಶ್ವ ಪರಿವರ್ತನೆಯನ್ನು ಮಾಡುತ್ತೇವೆ ಎಂದು ಪ್ರತಿಜ್ಞೆಯನ್ನು ಮಾಡಿದ್ದೀರಿ. ನೆನಪಿದೆಯೇ? ಸಂಸ್ಕಾರ ಪರಿವರ್ತನೆಯಿಂದ ಸಂಸಾರದ ಪರಿವರ್ತನೆಯನ್ನು ಮಾಡುತ್ತೇವೆ. ನೆನಪಿದೆಯೇ? ವರ್ಷವನ್ನು ಆಚರಿಸಿದಿರಿ ಸಂಸ್ಕಾರ ಪರಿವರ್ತನೆಯಿಂದ ಸಂಸಾರದ ಪರಿವರ್ತನೆ'. ಸಂಸಾರದ ಗತಿಯಂತೂ ಅತಿಯಲ್ಲಿ ಹೋಗುತ್ತಿದೆ ಆದರೆ ಸಂಸ್ಕಾರ ಪರಿವರ್ತನೆಯ ವೇಗ ಅಷ್ಟು ತೀವ್ರವಾಗಿದೆಯೇ? ಹಾಗೆ ನೋಡಿದರೆ ಫಾರಿನಿನ ವಿಶೇಷತೆಯಾಗಿದೆ, ಸಾಧಾರಣ ರೂಪದಲ್ಲಿಯೂ ಫಾರಿನ್ ತೀವ್ರವಾಗಿ ನಡೆಯುತ್ತದೆ, ಫಾಸ್ಟಾಗಿ ಮಾಡುತ್ತಾರೆ. ಅಂದಮೇಲೆ ತಂದೆ ಕೇಳುತ್ತಾರೆ- ಸಂಸ್ಕಾರ ಪರಿವರ್ತನೆಯಲ್ಲಿ ಫಾಸ್ಟ್ ಇದ್ದೀರಾ? ಬಾಪ್‌ದಾದಾರವರು ಸ್ವ ಪರಿವರ್ತನೆಯ ಗತಿಯು ತೀವ್ರವಾಗಿರುವುದನ್ನು ನೋಡಲು ಬಯಸುತ್ತಾರೆ. ಎಲ್ಲರೂ ಕೇಳುತ್ತೀರಲ್ಲವೇ! ಬಾಪ್‌ದಾದಾರವರು ಏನನ್ನು ಬಯಸುತ್ತಾರೆ? ಪರಸ್ಪರ ಆತ್ಮಿಕ ವಾರ್ತಾಲಾಪ ಮಾಡುತ್ತೀರಲ್ಲವೇ,  ಒಬ್ಬರು ಇನ್ನೊಬ್ಬರೊಂದಿಗೆ ಕೇಳುತ್ತೀರಿ ಬಾಪ್‌ದಾದಾರವರು ಏನನ್ನು ಬಯಸುತ್ತಾರೆ? ಬಾಪ್‌ದಾದಾರವರು ಇದನ್ನೇ ಬಯಸುತ್ತಾರೆ. ಸೆಕೆಂಡ್ ನಲ್ಲಿ ಬಿಂದು ಇಡಿ. ಹೇಗೆ ಕಾಗದದ ಮೇಲೆ ಬಿಂದು ಇಡುತ್ತೀರಿ ಅಲ್ಲವೇ, ಅದಕ್ಕಿಂತ ಫಾಸ್ಟ್, ಪರಿವರ್ತನೆಯಲ್ಲಿ ಏನೆಲ್ಲಾ ಅಯತಾರ್ಥವಿದೆಯೋ ಅದರಲ್ಲಿ ಬಿಂದುವಿಡಿ. ಬಿಂದುವನ್ನು ಇಡಲು ಬರುತ್ತದೆಯೇ? ಬರುತ್ತದೆ ಅಲ್ಲವೇ! ಆದರೆ ಕೆಲವೊಮ್ಮೆ ಪ್ರಶ್ನಾರ್ಥಕ ಚಿನ್ಹೆ ಬಂದುಬಿಡುತ್ತದೆ. ಬಿಂದುವನ್ನು ಇಡುತ್ತೀರಿ ಹಾಗೂ ಅದು ಪ್ರಶ್ನಾರ್ಥಕ ಚಿಹ್ನೆ ಆಗಿಬಿಡುತ್ತದೆ. ಇದು ಏಕೆ, ಇದು ಏನು? ಈ ಏಕೆ ಹಾಗೂ ಏನು... ಇದು ಬಿಂದುವನ್ನು ಪ್ರಶ್ನಾರ್ಥಕ ಚಿಹ್ನೆಯಲ್ಲಿ ಬದಲಾಯಿಸಿಬಿಡುತ್ತದೆ. ಬಾಪ್‌ದಾದಾರವರು ಮೊದಲು ಸಹ ಹೇಳಿದ್ದರು- ವೈ, ವೈ ಎನ್ನಬೇಡಿ, ಫ್ಲೈ ಅಥವಾ ವಾಹ್! ವಾಹ್! ಮಾಡಿ ಅಥವಾ ಫ್ಲೈ ಮಾಡಿ. ವೈ, ವೈ ಮಾಡಬೇಡಿ. ವೈ, ವೈ ಮಾಡುವುದು ಬೇಗ ಬಂದುಬಿಡುತ್ತದೆ! ಬರುತ್ತದೆ ಅಲ್ಲವೇ? ಯಾವಾಗ ವೈ ಬರುತ್ತದೆಯೋ ಆಗ ವಾಹ್ ವಾಹ್ ಮಾಡಿಬಿಡಿ. ಯಾರೇ ಏನೇ ಮಾಡಿದರೂ ವಾಹ್ ಡ್ರಾಮಾ ವಾಹ್ ಎಂದು ಹೇಳಿ! ಇವರು ಏಕೆ ಮಾಡುತ್ತಾರೆ, ಇವರು ಏಕೆ ಹೇಳುತ್ತಾರೆ, ಅಲ್ಲ. ಇವರು ಮಾಡಿದರೆ ನಾನೂ ಸಹ ಮಾಡುತ್ತೇನೆ ಎಂದು ಸಹ ಎನ್ನಬೇಡಿರಿ.

ಇತ್ತೀಚೆಗೆ ಬಾಪ್‌ದಾದಾರವರು ನೋಡುತ್ತಿದ್ದರು, ಹೇಳಲೇ! ಪರಿವರ್ತನೆ ಮಾಡಬೇಕಲ್ಲವೇ **ಇತ್ತೀಚೆಗೆ ಫಲಿತಾಂಶದಲ್ಲಿ ವಿದೇಶದಲ್ಲಾಗಲಿ ಅಥವಾ ಭಾರತದಲ್ಲಿ ಆಗಿರಲಿ ಎರಡು ಕಡೆ ಒಂದು ಮಾತಿನ ಅಲೆ ಇದೆ, ಅದು**

ಯಾವುದು? ಈ ರೀತಿ ಆಗಬೇಕು, ಇದು ಸಿಗಬೇಕು, ಇದು ಇವರು ಮಾಡಬೇಕು... ನಾನು ಏನನ್ನು ಯೋಚಿಸುತ್ತೇನೆ, ಹೇಳುತ್ತೇನೆಯೋ ಅದೇ ನಡೆಯಬೇಕು.. ಈ ಬೇಕು ಬೇಕು ಎನ್ನುವ ಮಾತು ಸಂಕಲ್ಪದಲ್ಲಿಯೂ ಇದ್ದರೆ ಅದು ವ್ಯರ್ಥ ಸಂಕಲ್ಪವಾಗಿದೆ, ವ್ಯರ್ಥ ಸಂಕಲ್ಪಗಳು ಸಮರ್ಥರಾಗಲು ಬಿಡುವುದಿಲ್ಲ. ಬಾಪ್‌ದಾದಾರವರು ಎಲ್ಲರ ವ್ಯರ್ಥದ ಚಾರ್ಟನ್ನು ಸ್ವಲ್ಪ ಸಮಯಕ್ಕಾಗಿ ನೋಟ್ ಮಾಡಿದ್ದಾರೆ. ಚೆಕ್ ಮಾಡಿದರು. ಬಾಪ್‌ದಾದಾರವರ ಬಳಿಯಂತೂ ಪವರ್ಫುಲ್ ಮಷೀನರಿ ಇದೆ ಅಲ್ಲವೇ. ನಿಮ್ಮಂತಹ ಕಂಪ್ಯೂಟರ್ ಇಲ್ಲ, ನಿಮ್ಮ ಕಂಪ್ಯೂಟರ್ ಅಂತೂ ಬೈಗುಳವನ್ನು ಸಹ ಕೊಡುತ್ತದೆ. ಆದರೆ ಬಾಪ್‌ದಾದಾರವರ ಬಳಿ ಚೆಕಿಂಗ್ ಮಷಿನರಿ ಬಹಳ ಫಾಸ್ಟ್ ಇದೆ. ಬಾಪ್‌ದಾದಾರವರು ನೋಡಿದರು ಬಹುತೇಕರ ವ್ಯರ್ಥವು ಇಡೀ ದಿನದಲ್ಲಿ ಮಧ್ಯ ಮಧ್ಯದಲ್ಲಿ ನಡೆಯುತ್ತದೆ. ಏನಾಗುತ್ತದೆ ಎಂದರೆ ವ್ಯರ್ಥ ಸಂಕಲ್ಪಗಳ ತೂಕ ಭಾರಿಯಾಗಿರುತ್ತದೆ ಹಾಗೂ ಬೆಸ್ಟ್ ಥಾಟ್ಸ್ ನ (ಸಮರ್ಥ ಸಂಕಲ್ಪಗಳು) ತೂಕ ಕಡಿಮೆ ಇರುತ್ತದೆ. ಆದ್ದರಿಂದ ಈ ಮಧ್ಯಮಧ್ಯದಲ್ಲಿ ಯಾವ ವ್ಯರ್ಥ ಸಂಕಲ್ಪಗಳು ನಡೆಯುತ್ತದೆಯೋ ಅದು ಬುದ್ಧಿಯನ್ನು ಭಾರಿ ಮಾಡಿಬಿಡುತ್ತದೆ. ಪುರುಷಾರ್ಥವನ್ನು ಭಾರಿ ಮಾಡಿಬಿಡುತ್ತದೆ, ಬೋಜ(ಭಾರ) ಆಗಿದೆ ಅಲ್ಲವೇ ಅದು ತನ್ನ ಕಡೆ ಸೆಳೆಯುತ್ತದೆ ಆದ್ದರಿಂದ ಸ್ವ ಉನ್ನತಿಯ ಲಿಫ್ಟ್ ಆದ ಶುಭ ಸಂಕಲ್ಪ, ಮೆಟ್ಟಿಲಲ್ಲ ಆದರೆ ಲಿಫ್ಟ್ ಆಗಿದೆ ಅದು ಕಡಿಮೆ ಆಗಿರುವ ಕಾರಣ, ಪರಿಶ್ರಮದ ಮೆಟ್ಟಿಲು ಹತ್ತಬೇಕಾಗಿ ಬರುತ್ತಿದೆ. ಕೇವಲ ಎರಡು ಶಬ್ಧಗಳನ್ನು ನೆನಪಿಟ್ಟುಕೊಳ್ಳಿರಿ- ವ್ಯರ್ಥವನ್ನು ಸಮಾಪ್ತಿ ಮಾಡುವುದಕ್ಕಾಗಿ ಅಮೃತ ವೇಳೆಯಿಂದ ಹಿಡಿದು ರಾತ್ರಿಯವರೆಗೂ ಎರಡು ವಿಷಯಗಳನ್ನು ಸಂಕಲ್ಪದಲ್ಲಿ, ಮಾತಿನಲ್ಲಿ ಹಾಗೂ ಕರ್ಮದಲ್ಲಿ, ಕಾರ್ಯದಲ್ಲಿ ತೊಡಗಿಸಿರಿ. ಪ್ರಾಕ್ಟಿಕಲ್ನಲ್ಲಿ ತನ್ನಿರಿ. ಆ ಎರಡು ಶಬ್ಧಗಳಾಗಿದೆ- ಸ್ವಮಾನ ಹಾಗೂ ಸನ್ಮಾನ. ಸ್ವಮಾನದಲ್ಲಿ ಇರಬೇಕು ಹಾಗೂ ಸನ್ಮಾನವನ್ನು ಕೊಡಬೇಕು ಯಾರೇ ಹೇಗೆ ಇರಲಿ, ನಾವು ಸನ್ಮಾನ ಕೊಡಬೇಕು. ಸನ್ಮಾನ ಕೊಡಬೇಕು, ಸ್ವಮಾನದಲ್ಲಿ ಸ್ಥಿತರಾಗಬೇಕು. ಎರಡರ ಬ್ಯಾಲೆನ್ಸ್ ಬೇಕಾಗಿದೆ. ಕೆಲವೊಮ್ಮೆ ಸ್ವಮಾನದಲ್ಲಿ ಜಾಸ್ತಿ ಇರುತ್ತೀರಿ ಕೆಲವೊಮ್ಮೆ ಸನ್ಮಾನ ಕೊಡುವುದರಲ್ಲಿ ಕಡಿಮೆಯಾಗಿ ಬಿಡುತ್ತದೆ. ಅನ್ಯರು ಸನ್ಮಾನ ಕೊಟ್ಟರೆ ನಾನು ಸನ್ಮಾನ ಕೊಡುತ್ತೇನೆ,. ಹೀಗಲ್ಲ. ನಾನು ದಾತನಾಗಬೇಕು. ಶಿವಶಕ್ತಿ ಪಾಂಡವ ಸೇನೆ ದಾತನ ಮಕ್ಕಳು ದಾತರಾಗಿದ್ದಾರೆ. ಅವರು ಕೊಟ್ಟರೆ ನಾನು ಕೊಡುತ್ತೇನೆ ಎಂಬುದಂತೂ ವ್ಯಾಪಾರವಾಯಿತು, ದಾತರಾಗಿಲ್ಲ. ಅಂದಮೇಲೆ ತಾವು ಬಿಸಿನೆಸ್ ಮ್ಯಾನ್(ವ್ಯಾಪಾರ ಗಾರ) ಆಗಿದ್ದೀರಾ ಅಥವಾ ದಾತರಾಗಿದ್ದೀರಾ? ದಾತರು ಎಂದೂ ಸಹ ಪಡೆಯುವವರಾಗಿರುವುದಿಲ್ಲ. ತಮ್ಮ ವೃತ್ತಿ ಹಾಗೂ ದೃಷ್ಟಿಯಲ್ಲಿ ಇದೇ ಲಕ್ಷ್ಯವನ್ನು ಇಟ್ಟುಕೊಳ್ಳಿರಿ. ನಾನು ಸದಾ ಪ್ರತಿಯೊಬ್ಬರ ಪ್ರತಿ ಅರ್ಥಾತ್, ಸರ್ವರ ಪ್ರತಿ ಭಲೇ ಅಜ್ಞಾನಿ ಆಗಿರಲಿ, ಅಥವಾ ಜ್ಞಾನಿ ಆಗಿರಲಿ, ಅಜ್ಞಾನಿಯರ ಪ್ರತಿಯಂತೂ ಶುಭ ಭಾವನೆಯನ್ನು ಇಡುತ್ತೀರಿ ಆದರೆ ಜ್ಞಾನಿ ಆತ್ಮರ ಪ್ರತಿ ಪರಸ್ಪರರಲ್ಲಿ ಪ್ರತಿ ಸಮಯ ಶುಭ ಭಾವನೆ, ಶುಭಕಾಮನೆ ಇರಲಿ. ಇಂತಹ ವೃತ್ತಿ ಆಗಲಿ, ಇಂತಹ ದೃಷ್ಟಿಯನ್ನಿಡಬೇಕು. ವೃತ್ತಿ ಮತ್ತು ದೃಷ್ಟಿಯಲ್ಲಿ ಈ ರೀತಿ ತಯಾರಾಗಿ ಬಿಡಬೇಕು ಸ್ಥೂಲವಾದ ಕಣ್ಣಲ್ಲಿ ಕಣ್ಣು ಗುಡ್ಡೆಗಳು ಇಲ್ಲದಿದ್ದರೆ ಏನಾಗುತ್ತದೆ? ನೋಡಬಲ್ಲಿರಾ? ಹೇಗಾದರೆ ಕಣ್ಣಿನಲ್ಲಿ ಕಣ್ಣು ಗುಡ್ಡೆಗಳು ಇರುತ್ತವೆಯೋ ಅದೇ ರೀತಿ ದೃಷ್ಟಿಯಲ್ಲಿ ಸದಾ ಆತ್ಮ ಮತ್ತು ಪರಮಾತ್ಮನ ಬಿಂದು ರೂಪವೂ ಸಮಾವೇಶವಾಗಿರಬೇಕು. ಕಣ್ಣುಗಳ ಮೂಲಕ ನೋಡುವ ಕಣ್ಣು ಗುಡ್ಡೆಗಳು ಯಾವಾಗಲೂ ಮಾಯವಾಗುವುದಿಲ್ಲ ತಾನೇ? ಅದೇ ರೀತಿ ಆತ್ಮ ಮತ್ತು ತಂದೆಯ ಸ್ಮೃತಿಯ ಬಿಂದು ವೃತ್ತಿ ಮತ್ತು ದೃಷ್ಟಿಯಿಂದ ಮಾಯವಾಗಬಾರದು. ತಂದೆಯನ್ನು ಅನುಸರಿಸಬೇಕಲ್ಲವೇ! ಹೇಗೆ ತಂದೆಯ ದೃಷ್ಟಿ ಹಾಗೂ ವೃತ್ತಿಯಲ್ಲಿ ಪ್ರತಿಯೊಂದು ಮಗುವಿಗಾಗಿ ಸ್ವಮಾನವಿದೆ,

**ಸನ್ಮಾನ(ಗೌರವ) ಇದೆ ಅದೇ ರೀತಿ ತಮ್ಮ ದೃಷ್ಟಿ, ವೃತ್ತಿಯಲ್ಲಿ ಸ್ವಮಾನ, ಸನ್ಮಾನ ಇರಲಿ.** ಸನ್ಮಾನ ಕೊಡುವುದರಿಂದ ಮನಸ್ಸಿನಲ್ಲಿ ಏನು ಬರುತ್ತದೆ- ಇವರು ಬದಲಾಗಲಿ, ಇದನ್ನು ಮಾಡದಿರಲಿ, ಇವರು ಹೀಗೆ ಆಗಲಿ, ಇದು ಶಿಕ್ಷಣದಿಂದ ಆಗುವುದಿಲ್ಲ ಆದರೆ ಸನ್ಮಾನ ಕೊಡುವುದರಿಂದ ಮನಸ್ಸಿನಲ್ಲಿ ಯಾವ ಸಂಕಲ್ಪ ಇರುತ್ತದೆ, ಹೀಗೆ ಆಗಲಿ, ಇವರು ಬದಲಾಗಲಿ, ಇವರು ಹೀಗೆ ಮಾಡಲಿ, ಅವರು ಹಾಗೆ ಮಾಡಲು ಶುರು ಮಾಡುತ್ತಾರೆ. ವೃತ್ತಿಯಿಂದ ಬದಲಾಗುತ್ತಾರೆ, ಮಾತುಗಳಿಂದ ಬದಲಾಗುವುದಿಲ್ಲ. ಅಂದ ಮೇಲೆ ಏನು ಮಾಡುವಿರಿ? ಸ್ವಮಾನ ಹಾಗೂ ಸನ್ಮಾನ, ಎರಡೂ ನೆನಪಿರುತ್ತದೆ ಅಲ್ಲವೇ ಅಥವಾ ಕೇವಲ ಸ್ವಮಾನ ನೆನಪಿರುತ್ತದೆಯೇ? ಸನ್ಮಾನ ಕೊಡುವುದು ಎಂದರೆ ಸನ್ಮಾನವನ್ನು ಪಡೆದುಕೊಳ್ಳುವುದು. ಯಾರಿಗಾದರೂ ಮಾನ್ಯತೆಯನ್ನು ಕೊಡುವುದು ಎಂದರೆ ಸ್ವಯಂ ಮಾನನೀಯರಾಗುವುದು. ಆತ್ಮಿಕ ಪ್ರೀತಿಯ ಚಿಹ್ನೆಯಾಗಿದೆ- ಅನ್ಯರ ಕೊರತೆಯನ್ನು ತಮ್ಮ ಶುಭ ಭಾವನೆ ಶುಭಕಾಮನೆಯಿಂದ ಪರಿವರ್ತನೆ ಮಾಡುವುದು. ಬಾಪ್‌ದಾದಾರವರು ಹಿಂದೆ ಸಂದೇಶವನ್ನು ಸಹ ಕಳುಹಿಸಿದ್ದರು- ವರ್ತಮಾನ ಸಮಯ ತಮ್ಮ ಸ್ವರೂಪವನ್ನು ತಯಾರು ಮಾಡಿಕೊಳ್ಳಿರಿ, ದಯಾಹೃದಯಿಯಾಗಿರಿ. ಲಾಸ್ಟ್ ಜನ್ಮದಲ್ಲಿಯೂ ಸಹ ತಮ್ಮ ಜಡ ಚಿತ್ರಗಳು ದಯಾಹೃದಯಿಯಾಗಿ ಭಕ್ತರ ಮೇಲೆ ದಯೆಯನ್ನು ತೋರಿಸುತ್ತಿದೆ. ಯಾವಾಗ ಚಿತ್ರವೇ ಇಷ್ಟು ದಯಾ ಹೃದಯಯಾಗಿದೆ ಅಂದ ಮೇಲೆ
ಚೈತನ್ಯದಲ್ಲಿ ಹೇಗಿರಬೇಕು? ಚೈತನ್ಯವಂತೂ ದಯೆಯ ಖಜಾನೆಯಾಗಿದೆ. ದಯೆಯ ಖಜಾನೆ ಆಗಿಬಿಡಿ. ಏನೇ ಬರಲಿ ದಯೆ ಇರುವುದು ಪ್ರೀತಿಯ ಚಿಹ್ನೆಯಾಗಿದೆ. ಮಾಡಬೇಕಲ್ಲವೇ? ಅಥವಾ ಕೇವಲ ಕೇಳಬೇಕೆ? ಮಾಡಲೇಬೇಕು, ಆಗಲೇಬೇಕು. ಅಂದ ಮೇಲೆ ಬಾಪ್‌ದಾದಾ ಏನನ್ನು ಬಯಸುತ್ತಾರೆ, ಇದರ ಉತ್ತರವನ್ನು ಕೊಡುತ್ತಿದ್ದಾರೆ. ಪ್ರಶ್ನೆ ಮಾಡುತ್ತೀರಲ್ಲವೇ, ಬಾಪ್‌ದಾದಾರವರು ಉತ್ತರಿಸುತ್ತಿದ್ದಾರೆ.

ಎಷ್ಟೋ ದೇಶಗಳಿಂದ ಬಂದಿದ್ದೀರಿ ಬಹಳ ಖುಷಿಯಾಗಿದೆ. ಭಿನ್ನ ಭಿನ್ನ ದೇಶಗಳಿಂದ ಮಧುಬನಕ್ಕೆ ಬಂದಿದ್ದೀರಿ. ಬಾಪ್‌ದಾದಾ ಹೋದ ವರ್ಷ ನಿಮಗೆ ಒಂದು ಕೆಲಸವನ್ನು ಕೊಟ್ಟಿದ್ದರು ನೆನಪಿದೆಯೇ? ಇದೇಯಾ ನೆನಪು? ಯಾರಿಗೆ ನೆನಪಿದೆ? ಪಾಂಡವರಿಗೋ? ಶಕ್ತಿಯರಿಗೋ? ಈ ವರ್ಷ ವಾರಸರನ್ನು ಮತ್ತು ಮೈಕ್ಷಂತವರನ್ನು ಬಾಪ್‌ದಾದಾರವರ ಎದುರಿಗೆ ತರಬೇಕು. ಎಷ್ಟು ಜನ ವಾರಸುಧಾರರನ್ನು ತಯಾರು ಮಾಡಿದ್ದೀರಿ? ಆಸ್ಟ್ರೇಲಿಯಾದವರು ಹೇಳಿರಿ ಎಷ್ಟು ಜನ ವಾರಸರು ಬಂದಿದ್ದಾರೆ? ಆಸ್ಟ್ರೇಲಿಯಾದವರು ಹೇಳಿರಿ ಎಷ್ಟು ಜನ ವಾರಸರು ಬಂದಿದ್ದಾರೆ? ಅಮೆರಿಕಾದಿಂದ ಎಷ್ಟು ಜನ ಬಂದಿದ್ದಾರೆ? ಮೈಕ್ ತಯಾರಾಗುತ್ತಾ ಇದ್ದಾರೆಯೇ? ತಂದೆಯ ಎದುರುಗಡೆ ಬರಲಿಲ್ಲವೇ? ನೀವು ಬಂದುಬಿಟ್ಟಿದ್ದೀರಿ ಆದರೆ ಮೈಕ್ ಮತ್ತು ವಾರಸರರನ್ನು ತರಲಿಲ್ಲ. ಬಂದಿದ್ದೀರಾ? ಹೊಸ ವಾರಸರು ಯಾವ ದೇಶದಿಂದ ಬಂದಿದ್ದಾರೆ? ಹಳೆಯವರಂತು ಇದ್ದಾರೆ ಯಾವ ದೇಶದವರಾದರೂ ಕೈಯನ್ನು ಎತ್ತಿರಿ. ಎಷ್ಟು ದೇಶಗಳಿಂದ ಬಂದಿದ್ದೀರಿ? (ಒಬ್ಬ ಅಕ್ಕ ಬಂದಿದ್ದಾರೆ) ಇವರು ವಾರಸರಾಗಿ ಬಂದಿದ್ದಾರೆಯೇ? ಶುಭಾಶಯಗಳು. ಬಹಳ ಒಳ್ಳೆಯದು. ಯಾವ ದೇಶದಿಂದ ಬಂದಿದ್ದಾರೆ? (ಕೊಲಂಬಿಯಾ) ಇನ್ನೂ ಎಲ್ಲಿಂದ ಬಂದಿದ್ದಾರೆ? (ಬ್ರೆಜಿಲ್ ನಿಂದ ಒಬ್ಬರು ಬಂದಿದ್ದಾರೆ) ಶುಭಾಶಯಗಳು. ಇನ್ನು ಎಲ್ಲಿಂದ ಬಂದಿದ್ದಾರೆ? (ಕೆನಡಾ, ಅರ್ಜೆಂಟಿನ, ಹಾಂಗ್ ಕಾಂಗ್ ನ್ಯೂಜಿಲ್ಯಾಂಡ್, ಜರ್ಮನಿ ಗಳಿಂದ ಬಂದಿದ್ದಾರೆ) ಬಹಳ ಒಳ್ಳೆಯದು. ಶುಭಾಶಯಗಳು. (ಹಾಂಕಾಂಗ್ ನಿಂದ ನಾಲ್ಕು ಜನ ಬಂದಿದ್ದಾರೆ) ಒಳ್ಳೆಯದು. ಪಕ್ಕಾ ವಾರಸರೇನಾ? ಒಳ್ಳೆಯದು. ಬ್ರಾಹ್ಮಣರಾಗಿ ಬಂದಿದ್ದಾರೆ. ಬಹಳ ಚೆನ್ನಾಗಿ ಸೇವೆಯಲ್ಲಿ ವೃದ್ಧಿಯನ್ನು ಮಾಡಿದ್ದಾರೆ. ಬಹಳ

ಒಳ್ಳೆಯದು. ವರ್ತಮಾನ ಸಮಯದಲ್ಲಿ ಸೇವೆಯಲ್ಲಿ ಬಹಳ ವೃದ್ಧಿಯಾಗುತ್ತಿದೆ. ಭಾರತ ದೇಶದಲ್ಲಿ ಮತ್ತು ವಿದೇಶಗಳಲ್ಲಿಯೂ ಸಹ ಆಗುತ್ತಿದೆ. ಆದರೆ ಬಾಪ್‌ದಾದಾ ಏನನ್ನು ಬಯಸುತ್ತಿದ್ದಾರೆ ಎಂದರೆ ವಿಶೇಷ ಕಾರ್ಯವನ್ನು ಮಾಡಿ ತೋರಿಸುವ ಯಾವುದೋ ಒಬ್ಬ ನಿಮಿತ್ತ ಆತ್ಮರನ್ನು ತಯಾರು ಮಾಡಿರಿ ಯಾವಾಗ ಏನನ್ನಾದರೂ ಮಾಡಬೇಕೆಂದುಕೊಳ್ಳುತ್ತಿರೋ ಅದನ್ನು ಮಾಡಿ ತೋರಿಸುವ ಸಹಯೋಗಿ ಆತ್ಮನನ್ನು ತಯಾರು ಮಾಡಿರಿ. ಬಹಳ ಕಾರ್ಯಕ್ರಮಗಳನ್ನು ತಯಾರು ಮಾಡಿದ್ದೀರಿ. ಎಲ್ಲಿ ಯಾವ ಕಾರ್ಯಕ್ರಮಗಳನ್ನು ಮಾಡಿದ್ದೀರೋ ಅವರೆಲ್ಲರಿಗೂ ಬಾಪ್‌ದಾದಾ ಧನ್ಯವಾದಗಳನ್ನು ಹೇಳುತ್ತಿದ್ದಾರೆ. ಈಗ ಇನ್ನೂ ನವೀನತೆಯನ್ನು (ಹೊಸತನ್ನು) ತೋರಿಸಿರಿ. ನಿಮ್ಮ ಕಡೆಯಿಂದ ನಿಮ್ಮ ಸಮಾನವಾಗಿ ಅವರು ತಂದೆಯನ್ನು ಪ್ರತ್ಯಕ್ಷ ಮಾಡಬೇಕು. **ಇದು ಪರಮಾತ್ಮನ ವಿದ್ಯಾಭ್ಯಾಸ ಎಂದು ಬಾಯಿಂದ ಬರಬೇಕು. ಬಾಬಾ, ಬಾಬಾ, ಎಂಬ ಮಾತು ಹೃದಯದಿಂದ ಬರಬೇಕು. ಸಹಯೋಗಿಯಂತೂ ಆಗುತ್ತಿದ್ದಾರೆ ಆದರೆ ಒಬ್ಬರೇ, ಒಬ್ಬರೇ, ಒಬ್ಬರೇ ಎಂಬ ಧ್ವನಿ ವ್ಯಾಪಿಸಬೇಕು.** ಬ್ರಹ್ಮಕುಮಾರಿಯರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಮತ್ತು ಮಾಡಬಲ್ಲರು ಎನ್ನುವಷ್ಟರವರೆಗೆ ಬಂದಿದ್ದಾರೆ. ಆದರೆ ಇದು ಒಬ್ಬನೇ ಪರಮಾತ್ಮನ ಜ್ಞಾನ ಎಂದು ಹೇಳಬೇಕು. ತಂದೆಯನ್ನು ಪ್ರತ್ಯಕ್ಷ ಮಾಡುವವರು ನಿರ್ಭಯವಾಗಿ ಮಾತನಾಡಬೇಕು. ಪರಮಾತ್ಮ ಕಾರ್ಯವನ್ನು ಮಾಡಿಸುತ್ತಿದ್ದಾರೆ, ಇದು ಪರಮಾತ್ಮನ ಕಾರ್ಯ ಎಂದು ನೀವು ಹೇಳುತ್ತಿದ್ದೀರಿ. ಆದರೆ ಯಾವ ಪರಮಾತ್ಮನನ್ನಾದರೇ ಎಲ್ಲರೂ ಕರೆಯುತ್ತಿದ್ದಾರೆಯೋ ಇದು ಆ ಪರಮಾತ್ಮನ ಜ್ಞಾನವೆಂದು ಅವರು ಹೇಳಬೇಕು. ಈಗ ಈ ಅನುಭವವನ್ನು ಮಾಡಿಸಿರಿ. ನಿಮ್ಮ ಮನಸ್ಸಿನಲ್ಲಿ ಪ್ರತಿಯೊಂದು ಸಮಯ ಏನಿರುತ್ತದೆ? ಬಾಬಾ, ಬಾಬಾ, ಬಾಬಾ, ಎಂಬ ಮಾತು.... ಹೀಗೆ ಅವರಿಗೂ ಸ್ಮೃತಿ ಇರುವ ಗ್ರೂಪ್ ತಯಾರಾಗಿದ್ದಾರೆಯೇ? ಚೆನ್ನಾಗಿ ಮಾಡುತ್ತಿದ್ದೀರಿ. ಸರಿಯಾಗಿದೆ. ಪರಿವರ್ತನೆಯಾಗಿದೆ ಆದರೆ ಅಂತಿಮ ಪರಿವರ್ತನೆ - ಒಬ್ಬರೇ, ಒಬ್ಬರೇ, ಒಬ್ಬರೇ. ಅದು ಯಾವಾಗ ಆಗುತ್ತದೆ ಎಂದರೆ ಬ್ರಾಹ್ಮಣ ಪರಿವಾರ ಏಕರಸ ಸ್ಥಿತಿಯುಳ್ಳವರಾಗಿ ತಯಾರಾದಾಗ. ಈಗ ಸ್ಥಿತಿ ಬದಲಾಗುತ್ತಿದೆ. ಏಕರಸ ಸ್ಥಿತಿ ಒಬ್ಬನನ್ನು ಪ್ರತ್ಯಕ್ಷ ಮಾಡುತ್ತದೆ. ಸರಿಯೇ? ಆದ್ದರಿಂದ ಡಬಲ್ ವಿದೇಶಿಯರಾಗಿ ಉದಾಹರಣೆಯಾಗಿರಿ. ನಂಬರ್ ಪಡೆಯಿರಿ. ಮಾಯಾಜಿತ್ ಪರಿವಾರದ ಕಥೆ ಹೇಳುತ್ತಾರಲ್ಲವೇ? ಅವರ ನೌಕರರೆಲ್ಲರೂ ಮೋಹಜೀತರು ಎಂದು ಹೇಳುತ್ತಾರೆ. ಹಾಗೆ ಎಲ್ಲಿ ಹೋದರೂ ಅಮೆರಿಕಾ ಹೋದರೂ, ಆಸ್ಟ್ರೇಲಿಯಾ ಹೋದರೂ, ಪ್ರತಿಯೊಂದು ದೇಶದಲ್ಲಿ ಏಕಮತ ಸ್ವಮಾನದಲ್ಲಿರುವವರು ಮತ್ತು ಸನ್ಮಾನವನ್ನು ಕೊಡುವವರಿರಬೇಕು. ಇದರಲ್ಲಿ ನಂಬರನ್ನು ಪಡೆಯಿರಿ. ನಂಬರ್ ಪಡೆಯಬೇಕೇ? ನಂಬರ್ ಪಡೆದು ತೋರಿಸಿದರೆ ಬಾಬಾ ಎರಡನೇ ಬಾರಿ ಬರುತ್ತಾರೆ. ಆದರೆ ಫಲಿತಾಂಶ ನೋಡಿದಾಗಲೇ, ಚಪ್ಪಾಳೆಯನ್ನು ಹೊಡೆಯಿರಿ. ಆದರೆ ಫಲಿತಾಂಶವನ್ನು ನೋಡುತ್ತೇನೆ. ಹಾರುವ ಕಲೆಯಲ್ಲಿರುವವರಲ್ಲವೇ? ಮೇಲೆ, ಕೆಳಕ್ಕೆ ಇಳಿಯಬೇಡಿರಿ. ಶ್ರಮವೆನಿಸುತ್ತದೆ. ಹಾರುತ್ತಾ ಇರಿ ಮತ್ತು ಹಾರಿಸಿರಿ, ಒಳ್ಳೆಯದು.

ಬಾಪ್‌ದಾದಾ ನೋಡಿದರು ಇಲ್ಲಿ ಬರದೇ ಇರುವಂತಹ ಮಕ್ಕಳು ಪ್ರಿಯ ಸ್ಮೃತಿಗಳನ್ನು ಕಳುಹಿಸಿದ್ದಾರೆ, ಉತ್ತರಗಳು ಸಹ ಬಹಳಷ್ಟು ಜನ ಕಳುಹಿಸಿದ್ದಾರೆ. ದೂರ ಕುಳಿತು ಸಹ ನೋಡುತ್ತಿದ್ದಾರೆ. ಆದರೆ ತಂದೆ ಹೇಳುತ್ತಿದ್ದಾರೆ ಅವರು ದೂರವಿಲ್ಲ. ಹೃದಯದಲ್ಲಿ ಇದ್ದಾರೆ. ಎಲ್ಲದಕ್ಕಿಂತಲೂ ಸಮೀಪವಾಗಿರುವುದು ಹೃದಯವಲ್ಲವೇ. ಆದ್ದರಿಂದ ಎಲ್ಲಿ ಕುಳಿತಿದ್ದರೂ ಸಹ ನೋಡಲಾಗದಿದ್ದರೂ ಸಹ ಮನಸ್ಸಿನಿಂದ ನೋಡುತ್ತಿದ್ದಾರೆ. ಸಾಧನಗಳ ಮೂಲಕ ನೋಡದೇ

ಇರುವವರು ಮನಸ್ಸಿನಿಂದ ನೋಡಬಲ್ಲರಲ್ಲವೇ? ಹೀಗೆ ಮನಸ್ಸಿನಿಂದ ನೋಡುವವರು, ದೂರದಲ್ಲಿರುವವರು ಎಲ್ಲರೂ ಬಾಪ್‌ದಾದಾರವರ ಹೃದಯ ಸಿಂಹಾಸನದ ಮೇಲೆ ಇದ್ದಾರೆ. ಮನಸ್ಸಿನಿಂದ ಪ್ರಿಯಸ್ಮೃತಿಗಳನ್ನು ಕಳುಹಿಸಿದ್ದಾರೆ. ತಮ್ಮ ಸಮಾಚಾರವನ್ನು ಕಳುಹಿಸಿದ್ದಾರೆ. ಆದ್ದರಿಂದ ಬಾಪ್‌ದಾದಾ ಸಹ ಎಲ್ಲರಿಗೂ ಪ್ರಿಯ ಸ್ಮೃತಿಗಳೊಂದಿಗೆ ವರದಾನವನ್ನು ಸಹ ಕೊಡುತ್ತಿದ್ದಾರೆ. ಗತಿಸಿ ಹೋದದ್ದೇನೋ ಗತಿಸಿ ಹೋಯಿತು. ಎಂದು ಬಿಂದುವನ್ನಿಟ್ಟು ಬಿಡಿ. ಬಿಂದುವಾಗಿ ಬಿಂದುವಾದ ತಂದೆಯನ್ನು ನೆನಪು ಮಾಡಿರಿ. ಇಲ್ಲಿಗೆ ಕಳುಹಿಸಿದ ಸಮಾಚಾರ ಮತ್ತು ಪ್ರಿಯಸ್ಮೃತಿಗಳಿಗೆ ಬಾಪ್‌ದಾದಾ ಉತ್ತರವನ್ನು ಕೊಡುತ್ತಿದ್ದಾರೆ. ಮೊದಲ ಅವಕಾಶವನ್ನು ಡಬಲ್ ವಿದೇಶೀಯರು ಪಡೆದಿದ್ದಾರೆ. ಆದ್ದರಿಂದ ಮೊದಲ ನಂಬರ್ ನಲ್ಲಿ ಸಹ ಬರಬೇಕು. ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ. ಅದೇ ರೀತಿಯಾಗಿ ನೀವು ಸಹ ತಂದೆಯನ್ನು ಅನುಸರಿಸಿ ಸದಾ ಖುಷಿಯಾಗಿರಿ. ಒಳ್ಳೆಯದು.

**ಈಗ ತಂದೆಯ ನಯನಗಳಲ್ಲಿ ಲೀನವಾಗಿರುವ ನಾಲ್ಕೂ ಕಡೆ ಇರುವ ನಯನರತ್ನಗಳಿಗೆ, ಸದಾ ಏಕರಸ ಸ್ಥಿತಿಯಲ್ಲಿ ಸ್ಥಿರಾಗುವ ಮಕ್ಕಳಿಗೆ, ಸದಾ ಭಾಗ್ಯದ ನಕ್ಷತ್ರ ಹೊಳೆಯುತ್ತಾ ಇರುವ ಭಾಗ್ಯವಂತರಾಗಿ ಸದಾ ಸ್ವಮಾನ ಮತ್ತು ಸನ್ಮಾನ ಎರಡನ್ನು ಜೊತೆ ಜೊತೆ ಇಡುವ ಮಕ್ಕಳಿಗೆ, ಸದಾ ತೀವ್ರ ವೇಗವಂತವಾದ ಪುರುಷಾರ್ಥವನ್ನು ಮಾಡುವ ಮಕ್ಕಳಿಗೆ, ಪ್ರಿಯ ಸ್ಮೃತಿಗಳು, ಆಶೀರ್ವಾದಗಳು ಮತ್ತು ನಮಸ್ತೆ. ಸ್ವ ಉಪಕಾರಿಯಾಗಿ ಅಪಕಾರಿಗೂ ಸಹ ಉಪಕಾರವನ್ನು ಮಾಡಿರಿ.**

ರಿವೈಸ್ ಕೋರ್ಸ್ 15-10-2004.

***ಏಕತೆಯನ್ನು ಪ್ರತ್ಯಕ್ಷ ಮಾಡುವುದಕ್ಕಾಗಿ ಏಕರಸ ಸ್ಥಿತಿಯನ್ನು ತಯಾರು ಮಾಡಿ, ಸ್ವಮಾನದಲ್ಲಿ ಇರಿ ಎಲ್ಲರಿಗೂ ಸನ್ಮಾನವನ್ನು ಕೊಡಿ.***

ಸಮಯದ ಸಮೀಪತೆಯ ಅನುಸಾರವಾಗಿ ಪರಿವರ್ತನಾ ಶಕ್ತಿ ಎಷ್ಟು ತೀವ್ರವಾಗಿರಬೇಕು ಎಂದರೆ ಪೇಪರ್ ನ ಮೇಲೆ ಬಿಂದುವನ್ನು ಇಡಲು ಎಷ್ಟು ಸಮಯವಿಡಿಸುತ್ತದೆಯೋ ಅಷ್ಟು ಸಮಯ ಹಿಡಿಸಬೇಕು. ಅಮೃತ ವೇಳೆಯಿಂದ ಹಿಡಿದು ರಾತ್ರಿಯವರೆಗೆ ಎರಡು ಶಬ್ದಗಳನ್ನು ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ತನ್ನಿರಿ. ಕಾರ್ಯದಲ್ಲಿ ಉಪಯೋಗಿಸಿರಿ. ಆ ಎರಡು ಶಬ್ದಗಳು ಸ್ವಾಮಾನ ಮತ್ತು ಸನ್ಮಾನ ಯಾರಿಗಾದರೂ ಗೌರವವನ್ನು(ಮಾನ್ಯತೆ) ಕೊಡುವುದು ಎಂದರೆ ಗೌರವನೀಯರಾಗುವುದು (ಮಾನನೀಯ) ಆತ್ಮಿಕ ಪ್ರೀತಿಗೆ ಗುರುತು ಇತರರ ಲೋಪವನ್ನು ನಿಮ್ಮ ಶುಭಭಾವನೆ, ಶುಭಕಾಮನೆಯ ಮೂಲಕ ಪರಿವರ್ತನೆ ಮಾಡಬೇಕು. ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಬಾಪ್‌ದಾದಾ ನನ್ನ ಮಸ್ತಕದಲ್ಲಿ ಪರಮಾತ್ಮನ ಪಾಲನೆ,  ಪರಮಾತ್ಮನ ವಿದ್ಯೆ, ಪರಮಾತ್ಮನ ವರದಾನಗಳ ಮೂರು ಭಾಗ್ಯದ ನಕ್ಷತ್ರಗಳನ್ನು ನೋಡುತ್ತಿದ್ದಾರೆ.

2. ನಾನು ಹೃದಯದಿಂದ ಮತ್ತು ಪ್ರೀತಿಯಿಂದ ನನ್ನ ಬಾಬಾ ಎಂದಾಕ್ಷಣ ತಂದೆಯು ನನ್ನ ಹತ್ತಿರ ತಲುಪಿ ಎಕ್ಸ್ಟ್ರಾ ಸಹಯೋಗವನ್ನು ಕೊಟ್ಟಿದ್ದಾರೆ.

3. ನಾನು ತಂದೆಯೊಂದಿಗೆ ಹೃದಯದಿಂದ ವ್ಯಾಪಾರ ಮಾಡುವ ಬುದ್ಧಿಯುಳ್ಳವನು.

4. ಕಾಗದದ ಮೇಲೆ ಬಿಂದುವಿಡಲು ಎಷ್ಟು ಸಮಯ ಹಿಡಿಸುತ್ತದೆಯೋ (ಕ್ಷಣಕ್ಕಿಂತಲೂ ಕಡಿಮೆ) ಅಷ್ಟು ತೀವ್ರ ವೇಗವಾಗಿ ನನ್ನ ಸ್ವಯಂನ ಪರಿವರ್ತನೆಯ ಶಕ್ತಿಯು ಇದೆ.

5. ಏಕೆ, ಏನು ಎಂಬ ಪ್ರಶ್ನೆ ಬಂದಾಗ ನಾನು ವಾಹ್! ವಾಹ್! ಎಂದು ಪರಿವರ್ತನೆ ಮಾಡಿಕೊಂಡಿದ್ದೇನೆ.

6. ಇವರು ಏಕೆ ಮಾಡಿದ್ದಾರೆ, ಇವರು ಏಕೆ ಹೇಳಿದ್ದಾರೆ, ಇವರು ಮಾಡಿದರೆ ನಾನು ಮಾಡುತ್ತೇನೆ ಎನ್ನದೇ ಅವರು ಏನು ಮಾಡಿದರೂ, ಹೇಳಿದರೂ ವಾಹ್! ವಾಹ್! ಡ್ರಾಮ ವಾಹ್!  ಎಂದುಕೊಳ್ಳುತ್ತಿದ್ದೇನೆ.

7. ನಾನು ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಿ, ಶುಭ ಸಂಕಲ್ಪಗಳನ್ನು ನನ್ನ ಸ್ವಯಂ ನ ಉನ್ನತಿಗಾಗಿ ಲಿಫ್ಟ್ ನಂತೆ ಮಾಡಿಕೊಂಡಿದ್ದೇನೆ.

8. ಯಾರು ಹೇಗಿದ್ದರೂ ನಾನು ಸ್ವಮಾನದಲ್ಲಿ ಇರುತ್ತಾ ಸನ್ಮಾನವನ್ನು (ಗೌರವವನ್ನು) ಕೊಡುವ ದಾತ ಸ್ವರೂಪ.

9. ನಾನು ವೃತ್ತಿ ಮತ್ತು ದೃಷ್ಟಿಯಲ್ಲಿ ಪ್ರತಿಯೊಂದು ಆತ್ಮನ ಅಜ್ಞಾನಿಯಾದರೂ, ಜ್ಞಾನಿಯಾದರೂ, ಸದಾ ಶುಭ ಭಾವನೆ, ಶುಭಕಾಮನೆಯನ್ನಿಡುವ ದಯಾ ಸ್ವರೂಪ.

10. ಹೇಗಾದರೆ ಕಣ್ಣಲ್ಲಿ ಕಣ್ಣಿನ ಗುಡ್ಡೆ ಯಾವಾಗಲೂ ಇರುತ್ತದೆಯೋ,  ಹಾಗೆಯೇ ನನ್ನ ವೃತ್ತಿ ಮತ್ತು ದೃಷ್ಟಿಯಿಂದ ಆತ್ಮ ಮತ್ತು ತಂದೆಯ ಬಿಂದುಸ್ವರೂಪವು ಸಮಾವೇಶವಾಗಿದೆ.

11. ನಾನು ವೃತ್ತಿಯ ಮೂಲಕ ಇತರರಿಗೆ ಗೌರವವನ್ನು ಕೊಡುವ ಕಾರಣ ನನ್ನ ಮನಸ್ಸಿಗೆ ಹೇಗೆ ಅನಿಸುತ್ತದೆಯೋ ಹಾಗೆ ಅವರು ಮಾಡುವುದನ್ನು ಪ್ರಾರಂಭಿಸಿದ್ದಾರೆ.

12. ನಾನು ದಯಾಹೃದಯಿಯಾಗಿ ಇತರರ ಲೋಪವನ್ನು ನನ್ನ ಶುಭ ಭಾವನೆ, ಶುಭಕಾಮನೆಯ ಮೂಲಕ ಪರಿವರ್ತನೆ ಮಾಡುವ ದಯೆಯ ಖಜಾನೆಯಾಗಿದ್ದೇನೆ.

13. ನಾನು ಏಕರಸ ಸ್ಥಿತಿಯ ಮೂಲಕ ಒಬ್ಬರನ್ನೇ ಪ್ರತ್ಯಕ್ಷ ಮಾಡಿದ್ದೇನೆ.

14. ನಾನು ಹಾರುವ ಕಲೆಯಲ್ಲಿ ಹಾರುತ್ತಾ ಇದ್ದೇನೆ ಮತ್ತು ಹಾರಿಸುತ್ತಿದ್ದೇನೆ.

15. ನಾನು ಗತಿಸಿ ಹೋದದ್ದನ್ನು ಗತಿಸಿ ಹೋಯಿತು ಎಂದು ಬಿಂದುವನ್ನಿಟ್ಟು, ಬಿಂದುವಾಗಿ, ಬಿಂದುವಾದ ತಂದೆಯನ್ನು ನೆನಪು ಮಾಡುತ್ತಿದ್ದೇನೆ.